# <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.</u>

## <u>ಸಿ.ಸಿ.ನಂ.72/2021</u>

**1)** **ಕರ್ನಾಟಕ ಸರ್ಕಾರ,**
**ಜಮಖಂಡಿ ನಗರ ಪೋಲೀಸ ಠಾಣೆ**

**........ಫಿರ್ಯಾದಿ**

**ವಿರುದ್ಧ**

**1)** **ಸಚಿನ್ ರವಿ ಸಿಂಗಾರಡ್ಡಿ,**
ವಯಸ್ಸುಃ-22 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಬಂಟನೂರ, ತಾಃ ಮುಧೋಳ,
ಜಿಃ ಬಾಗಲಕೋಟೆ.

**...........ಆರೋಪಿ**

**<u>:: ದೋಷಾರೋಪಣೆ::</u>**

ನಾನು ಶ್ರೀಮತಿ ಕವಿತಾ.ಎಸ್.ಉಂಡೋಡಿ, **ಬಿ.ಎ. ಎಲ್.ಎಲ್.ಬಿ.** ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಂಧಿಕಾರಿಗಳು, ಜಮಖಂಡಿ.

ಮೇಲೆ ನಮೂದಿಸಿದ ಆರೋಪಿಯಾದ ನೀವು ನಿಮ್ಮ ಮೇಲೆ ದಂ**<u>ಡ ಪ್ರಕ್ರಿಯಾ ಸಂಹಿತೆ ಕಲಂ 216 ರ ಅಡಿ ಈ ಕೆಳ</u>**ಗಿನಂತೆ ದೋಷಾರೋಪಣೆ ಇದೆ.

ದಿನಾಂಕ 21-06-2021 ರಂದು ಸಾಯಂಕಾಲ 5-40 ಗಂಟೆಯ ಸುಮಾರಿಗೆ ಜಮಖಂಡಿಯ ಪ್ರಭಾತ ನಗರದಲ್ಲಿಂದ ಜಮಖಂಡಿ-ಮೈಗೂರ ಮುಖ್ಯ ರಸ್ತೆಗೆ ಸೇರುವ ಅಡ್ಡರಸ್ತೆಯಲ್ಲಿ ಆರೋಪಿಯಾದ ನೀವು ಸುಲಿಗೆ ಮಾಡುವ ಉದ್ದೇಶದಿಂದ ನಿಮ್ಮ ಹೊಂಡಾ ಶೈನ್ ಮೋಟಾರ ಸೈಕಲ್ ಮೇಲೆ ಬಂದು, ಎದುರುನಿಂದ ಬರುತ್ತಿದ್ದ ಚಾಸಾ-1 ರವರ ಕೈಯಲ್ಲಿರುವ ಪರಸು, ಅದರಲ್ಲಿದ್ದ ವಿವೋ ಎಸ್-1 ಪ್ರೋ ಕಂಪನಿಯ ಮೊಬೈಲ್, ಎಸ್‌ಬಿಐ ಡೆಬಿಟ್ ಕಾರ್ಡ, ಆಧಾರಕಾರ್ಡ ಮತ್ತು 500/- ರೂಪಾಯಿಗಳನ್ನು ಸುಲಿಗೆ ಮಾಡಿಕೊಂಡು ಹೋಗಿದ್ದು ಮತ್ತು ಚಾಸಾ-1 ರವರ ಮೊಬೈಲದ ಫೋನಪೇ

ಖಾತೆಯಿಂದ ದಿಃ 21-06-2021 ರಂದು ಚಾಸಾ-8 ರವರ ಖಾತೆಗೆ 5000/- ರೂಪಾಯಿ ಮತ್ತು ಚಾಸಾ-9 ರವರ ಖಾತೆಗೆ 5000/- ರೂಪಾಯಿ ಹೀಗೆ ಒಟ್ಟು 10000/- ರೂಪಾಯಿಗಳನ್ನು ವರ್ಗಾಯಿಸಿ ಆ ಮೂಲಕ ಭಾರತ ದಂಡ ಸಂಹಿತೆ ಕಲಂ.392 ರಡಿಯಲ್ಲಿ ಶಿಕ್ಷಾರ್ಹ ಅಪರಾಧವನ್ನು ಮಾಡಿರುತ್ತೀರಿ.

ಓ.ಹೇ.ಕೇ. ಸರಿ ಇದೆ.

ಸ್ಥಳಃ- ಜಮಖಂಡಿ.
ದಿನಾಂಕಃ-21-12-2024

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.

## <u>ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು ಹಾಗೂ ಜೆ.ಎಮ್.ಎಫ್.ಸಿ. ಜಮಖಂಡಿ.</u>

### <u>ಸಿ.ಸಿ.ನಂ.72/2021</u>

**1) ಕರ್ನಾಟಕ ಸರ್ಕಾರ,**
**ಜಮಖಂಡಿ ನಗರ ಪೋಲೀಸ ಠಾಣೆ**

**........ಫಿರ್ಯಾದಿ**

**ವಿರುದ್ಧ**

**1) ಸಚಿನ್ ರವಿ ಸಿಂಗಾರಡ್ಡಿ,**
ವಯಸ್ಸುಃ-22 ವರ್ಷ, ಉದ್ಯೋಗಃ ಒಕ್ಕಲುತನ,
ಸಾಃ ಬಂಟನೂರ, ತಾಃ ಮುಧೋಳ,
ಜಿಃ ಬಾಗಲಕೋಟೆ.

**.......ಆರೋಪಿ**

**<u>ಕಲಂ 240 ದಂಡ ಪ್ರಕ್ರಿಯಾ ಸಂಹಿತೆ ಅಡಿಯಲ್ಲಿ ಆರೋಪಿಯ ಹೇಳಿಕೆಯ ನಮೂನೆ</u>**

ಪ್ರಶ್ನೆ 1)ಃ- ಈ ಮೇಲೆ ತಮ್ಮ ವಿರುದ್ಧ ರಚಿಸಲಾದ ದೋಷಾರೋಪಣೆಯನ್ನು ಓದಿ ಹೇಳಲಾಗಿದ್ದು, ಅರ್ಥವಾಗಿದೆಯೇ ?

ಉತ್ತರ ಃ- ಅರ್ಥವಾಯಿತು.

ಪ್ರಶ್ನೆಃ2) ಃ- ರಚಿಸಲಾದ ದೋಷರೋಪಣೆಯನ್ನು ಒಪ್ಪುವಿರೇ? ಅಥವಾ ವಿಚಾರಣೆಯನ್ನು ಬಯಸುವಿರಾ ?

ಉತ್ತರ ಃ- ಸುಳ್ಳು ವಿಚಾರಣೆಯಾಗಬೇಕು.

ನನ್ನ ಸಮಕ್ಷಮ ದೋಷಾರೋಪಣೆಯ ಸಾರಾಂಶವನ್ನು ಆರೋಪಿಗೆ ತಿಳಿಯುವ ಕನ್ನಡ ಭಾಷೆಯಲ್ಲಿ ಓದಿ ಹೇಳಿ ಆತನ ಹೇಳಿಕೆಯನ್ನು ಯಥವತ್ತಾಗಿ ನಮೂದಿಸಿದೆ. ಸದರಿ ಹೇಳಿಕೆಯನ್ನು ಆರೋಪಿ ಹೇಳಿದ ರೀತಿಯಲ್ಲಿ ಇರುತ್ತದೆ ಎಂದು ಈ ಮೂಲಕ ಧೃಢೀಕರಿಸಲಾಗಿದೆ.

ಓ.ಹೇ.ಕೇ. ಸರಿ ಇದೆ.

ಸ್ಥಳಃ- ಜಮಖಂಡಿ.
ದಿನಾಂಕಃ- 21-12-2024

ಸಹಿ/-
ಪ್ರಧಾನ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಮ್.ಎಫ್.ಸಿ. ಜಮಖಂಡಿ.